ಅಸಲು ದಾವಾಃ - 284/2013 ಡಿ.ಡಬ್ಲ್ಯೂಃ- 3

ದಿನಾಂಕಃ 24.10.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ 1(ಎ ಯಿಂದ ಡಿ) ಪರ ಶ್ರೀ.ಯು ಕೆ ವಕೀಲರಿಂದ

ದಾವೆ ವಜಾ ಆಗಬೇಕೆಂದು ನಾನು ನನ್ನ ಪ್ರತಿವಾದ ಪತ್ರದಲ್ಲಿ ಕೋರಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ದಾವೆಯನ್ನು ವಜಾ ಮಾಡಬೇಕು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕೋರಿಕೊಂಡಿರುತ್ತೇನೆ ಎಂದರೆ ಸರಿ. ದಾವೆಯಲ್ಲಿ ವಾದಿಯು ನನ್ನ ವಿರುದ್ಧ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸಾಕ್ಷಿಯು ನಿರ್ಭಂದಕಾಜ್ಞೆ ಪರಿಹಾರ ಕೋರಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ನನ್ನ ವಿರುದ್ಧ ದಾವೆಯಲ್ಲಿ ಯಾವುದೇ ಆರೋಪ ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಅತಿಕ್ರಮ ಪ್ರವೇಶ ಮಾಡುತ್ತೇನೆ ಎಂದು ನನ್ನ ವಿರುದ್ಧ ನಿರ್ಭಂದಕಾಜ್ಞೆ ಆದೇಶ ಕೇಳಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವೆಯಲ್ಲಿ ಕೌಂಟರ್ ಕ್ಲೈಮ್ ಕೇಳಿದ್ದೀರಾ ಎಂದರೆ ಇಲ್ಲ. ನನ್ನ, ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ಯಾವುದೇ ವಿಭಾಗ ಆಗಿಲ್ಲ, ದಾವಾ ಸ್ವತ್ತಿನ ಖಾತೆ ನಮ್ಮ ಜಂಟಿ ಹೆಸರಿಗೆ ಇದ್ದು ನಾವೆಲ್ಲರೂ ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿಯಲ್ಲ. ದಿಃ 05.09.2013 ರಲ್ಲಿ ವಿಭಾಗ ಆಗಿತ್ತು ಎಂದು ವಾದಿ ಹೇಳಿಕೊಂಡಿದ್ದು ಅದರಂತೆ ಮ್ಯುಟೇಷನ್ ಆಗಿದೆಯಾ ಎಂದರೆ ಸಾಕ್ಷಿಯು ಸದರಿ ದಿನಾಂಕದಂದು ಯಾವುದೇ ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ. ವಾದಿಯು ನನ್ನ ವಿರುದ್ಧ ಯಾವುದೇ ಪರಿಹಾರ ಕೇಳದೇ ಇದ್ದರೂ ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ತಕರಾರು ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಿಡಿ 8 ರಂತೆ ಓಎಸ್ 283/2013 ರ ದಾವೆಯನ್ನು ನಾನು ನನ್ನ ಅಣ್ಣ ಪರಮೇಶ್ವರಪ್ಪರವರ ವಿರುದ್ಧ ದಾವೆ ಹಾಕಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ವಿಭಾಗ ಪತ್ರದ ಆಧಾರದ ಮೇಲೆ ಹಾಕಿರುತ್ತೇನೆ ಎಂದರೆ ಸಾಕ್ಷಿಯು ಮರಣ ಶಾಸನ ಪತ್ರದ ಆಧಾರದ ಮೇರೆಗೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಕಿದ್ದ ಓಎಸ್ 283/2013 ರ ದಾವೆ ವಜಾ ಆಗಿರುತ್ತದೆ ಎಂದರೆ ಸರಿ

ಮುಂದುವರೆದು ಸಾಕ್ಷಿಯು ಅದರ ವಿರುದ್ಧ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಪೀಲು ಈಗಲೂ ನಡೆಯುತ್ತಿದೆ ಎಂದು ನುಡಿಯುತ್ತಾರೆ. ಓಎಸ್ 283/2013 ರ ದಾವೆಯಲ್ಲಿ ನನ್ನ ಇತರೇ ಸಹೋದರ ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸಾಕ್ಷಿಯು ಮೊದಲು ಮಾಡಿರಲಿಲ್ಲ ನಂತರ ಕುಟುಂಬದ ಎಲ್ಲಾ ಸದಸ್ಯರನ್ನು ಪಕ್ಷಗಾರನ್ನಾಗಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಹಂತದಲ್ಲಿ ಎಲ್ಲಾ ಸದಸ್ಯರನ್ನು ಪಕ್ಷಗಾರರನ್ನಾಗಿ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸಾಕ್ಷಿಯು ಮಾನ್ಯ ಜಿಲ್ಲಾ ನ್ಯಾಯಾಲಯದ ಅಪೀಲಿನಲ್ಲಿ ನಿರ್ದೇಶನದ ಮೇರೆಗೆ ಇದೇ ನ್ಯಾಯಾಲಯದಲ್ಲಿ ಎಲ್ಲಾ ಕುಟುಂಬದ ಸದಸ್ಯರನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಿಲ್ಲಾ ನ್ಯಾಯಾಲಯದ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಜಿಲ್ಲಾ ನ್ಯಾಯಾಲಯದ ಯಾವುದೇ ಆದೇಶದ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಒಟ್ಟು ಕುಟುಂಬದ ಆಸ್ತಿಗಳಲ್ಲಿ ವಿಭಾಗ ಬೇಕು ಎಂದು ಓಎಸ್ 222/2022 ರಂತೆ ನಾನು ಹಾಕಿರುವ ದಾವೆ ಚಾಲ್ತಿಯಲ್ಲಿದೆ ಎಂದರೆ ಸಾಕ್ಷಿಯು ಮರಣ ಶಾಸನದ ಆಧಾರದ ಮೇಲೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ